# ಕಾಲೇಜು ಎಲೆಕ್ಷನ್ ಅವಾಂತರ

ವೈಷ್ಣವಿ. ಯಂ.ಯಸ್
ತೃತೀಯ ಪತ್ರಿಕೋದ್ಯಮ

**ಕಾ**ಲೇಜಿನಲ್ಲಿ ಚುನಾವಣೆ ನಡೆಸುದರಿಂದ ಅಭ್ಯರ್ಥಿಯ ಆಯ್ಕೆಯನ್ನು ಮಾಡಿ ಪ್ರಜಾಪ್ರಭುತ್ವ ಮತದಾನದ ಹಕ್ಕನ್ನು ಮಕ್ಕಳು ಎಳವೆಯಲ್ಲಿ ತಿಳಿಯಲು ಸಹಕಾರಿ.ಎಳವೆಯಲ್ಲಿಯೇ ಶಾಲೆ,ಕಾಲೇಜುಗಳಲ್ಲಿ ಮಕ್ಕಳು ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದು ಆಡಳಿತವನ್ನು ಹೇಗೆ ನಡೆಸಲು ಸಾಧ್ಯ ಎಂಬ ವಿಷಯಗಳನ್ನು ತಿಳಿಯುದರಿಂದ ಮುಂದಿನ ದಿನಗಳಲ್ಲಿ ಸರಿಯಾದ ಅಭ್ಯರ್ಥಿಯನ್ನು ಆಯ್ಕೆ ಮಾಡಲು ಮುನ್ನುಡಿ ಬರೆದಂತಾಗುತ್ತದೆ.



ಕಾಲೇಜು ಚುನಾವಣೆಯು ಯಾವುದೇ ಆಸೆ, ಆಮಿಷ, ಬೆದರಿಕೆಗೆ ಮಣಿಯದೆ ಮತದಾನ ಮಾರಾಟವಾಗದೆ ನಡೆದರೆ ಉತ್ತಮ. ಮತದಾನದ ಸಮಯದಲ್ಲಿ ತನ್ನದೇ ಆದ ಪಕ್ಷ, ಸ್ಪರ್ಧೆ ಇರುವುದು ಸಮಾನ್ಯ ಸ್ಪರ್ಧೆ ಚುನಾವಣೆಗಷ್ಟೇ ಸೀಮಿತವಾಗಿದ್ದು ದ್ವೇಷಕ್ಕೆ ತಿರುಗದಂತೆ ನೋಡಿಕೊಳ್ಳಬೇಕು. ಚುನಾವಣೆಯಲ್ಲಿ ಗೆದ್ದಬಳಿಕ ವಿರೋಧ ಪಕ್ಷ ಎಂಬ ಭಾವನೆಯಿಂದ ದ್ವೇಷ ಹೊಂದುವುದು ಸರಿಯಲ್ಲ. ಗೆದ್ದ ಅಭ್ಯರ್ಥಿ ಎಲ್ಲರನ್ನೂ ಸಮಾನ ದೃಷ್ಟಿಯಲ್ಲಿ ನೋಡಬೇಕು. ಹಾಗೆಯೇ ಎಲ್ಲಾ ಸಮಸ್ಯೆಗಳಿಗೂ ಸಮಾನವಾದ ಪರಿಹಾರ ನೀಡಬೇಕು.

ನಮ್ಮ ದೇಶದ ಚುನಾವಣಾ ಮಾದರಿಯಲ್ಲಿಯೇ ಕಾಲೇಜು ಎಲೆಕ್ಷನ್ ನಡೆಸುತ್ತಿದೆ. 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬಂತೆ ಮುಂದಿನ ಭವಿಷ್ಯದಲ್ಲಿ ರಾಜಕಾರಣಿಯಾಗುವೆ ಎಂಬ ಪರಿಕಲ್ಪನೆ ಇರುವವರಿಗೆ ಇದೊಂದು ಸಮರ್ಥ ವೇದಿಕೆ. ನಮ್ಮ ದೇಶದಲ್ಲಿ ನಡೆಯುತ್ತಿರುವ ಗಬ್ಬೆಬ್ಬಿದ ಹೊಲಸು ರಾಜಕೀಯ ಕಾಲೇಜಿನಲ್ಲಿ ನಡೆಯಲೇ ಬಾರದು.

ಲಂಚ, ದ್ವೇಷ, ಆಮಿಷ ಮುಂತಾದವುಗಳನ್ನು ಕಿತ್ತೊಗೆದರೆ ಉತ್ತಮ ದೇಶ ಬೇಕೆಂದು ಎಲ್ಲರೂ ಹೇಳುತ್ತಿದ್ದಾರೆ. ಅಂತಹ ಕಲ್ಪನೆಯ ಒಳ್ಳೆಯ ರಾಜಕೀಯ ಕಾಲೇಜಿನಲ್ಲಿ ನಿರ್ಮಿಸಬೇಕು. ನಂತರ ಕಾಲಾನುಕ್ರಮದಲ್ಲಿ ದೇಶದ ರಾಜಕೀಯವೂ ಸುಸ್ಥಿತಿಗೆ ಬರಲು ಕಾಲೇಜು ರಾಜಕೀಯ ತಳಹದಿಯಾಗುವುದು.

ಕಾಲೇಜು ಚುನಾವಣಾ ಸಂದರ್ಭದಲ್ಲಿ ಕೇವಲ ಮತಕ್ಕಾಗಿ ಎಲ್ಲರೊಂದಿಗೆ ಬೆರೆತು ತಾನು ಗೆಲ್ಲುವವರೆಗೆ ಆಶ್ವಾಸನೆ ನೀಡುತ್ತಾ ತನ್ನ ಕಾರ್ಯ ಮುಗಿದ ಮೇಲೆ ತಿರುಗಿಯೂ ನೋಡದವರಾಗ ಬಾರದು. ಹೀಗೆಮಾಡಿದರೆ ರಾಜ್ಯ ರಾಜಕಾರಣ ಕಾಲೇಜಿಗೂ ಕಾಲಿಟ್ಟಂತಾಗುವುದು. ಇದರ ಬದಲಾಗಿ ಸುಸಜ್ಜಿತ ಮಂತ್ರಿಮಂಡಲ, ಸಮಸ್ಯೆಗಳಿಗೆ ಚೊಕ್ಕಟ ಪರಿಹಾರ ಪಕ್ಷಪಾತ ರಹಿತ ಆಡಳಿತವನ್ನು ಗೆದ್ದ ಅಭ್ಯರ್ಥಿ ನೀಡಬೇಕು. ಇನ್ನು ಗೆದ್ದ ಮೇಲೆ ಸಂಭ್ರಮಾಚರಣೆ ವಿಜ್ರಂಭಣೆಯಿಂದಲೇ ನಡೆಯಲಿ. ಆದರೆ ಸಾರ್ವಜನಿಕರಿಗೆ ,ಇತರ ವಿದ್ಯಾರ್ಥಿಗಳಿಗೆ ತೊಂದರೆ ಆಗದಂತೆ ನಡೆಸಬೇಕು. ಆಚರಣೆ- ಯ ಭರದಲ್ಲಿ ರಕ್ಷಣೆ- ಯ ಹೊಣೆ ಕೂಡಾ ವಿದ್ಯಾರ್ಥಿಗಳ ಜವಾಬ್ದಾರಿ ಎಂಬುದು ಮನಸಿನಲ್ಲಿರಲಿ. ದೇಶದ ಚುಕ್ಕಾಣಿಯನ್ನು ಹಿಡಿಯುವ ರಾಜಕಾರಣಿಗಳಂತೆ ಕಾಲೇಜು ಕೂಡಾ ಅತಂತ್ರದ ಸೆಲೆಯಾಗಬಾರದು. ಸಂಭ್ರಮಾಚರಣೆಗೆ ಕಾಲೇಜು ವಿದ್ಯಾರ್ಥಿಗಳಿಗಷ್ಟೇ ಸೀಮಿತವಾಗಿರಲಿ, ಬದಲಾಗಿ ಹೊರಗಿನ ವ್ಯಕ್ತಿಗಳ ಪ್ರವೇಶ ಸಲ್ಲದು. ಕಾಲೇಜು ಚುನಾವಣಾ ನೀತಿಯನ್ನು ಉಲ್ಲಂಘಿಸಿದಲ್ಲಿ ಕಾಲೇಜು ಆಡಳಿತ ಮಂಡಳಿ ತಪ್ಪಿತಸ್ಥರ ವಿರುದ್ಧ ಮುಲಾಜಿಲ್ಲದೆ ಕಾನೂನು ಹೊರಡಿಸಿ ಮುಂದಿನ ಸಂಭ್ರಮಾಚರಣೆಯನ್ನು ಇಲ್ಲದಂತಾಗಿಸಬಹುದು. ಅದೇನೇ ಇರಲಿ ಕಾಲೇಜು ಜೀವನದ ಚುನಾವಣೆ ಕೇವಲ ಸ್ಪರ್ಧಾತ್ಮಕವಾಗಿರಬೇಕೇ ವಿನಃ ವ್ಯವಹಾರಿಕವಾಗಲ್ಲ.

# ಕಣ್ಣಂಚಿನ ಕಲ್ಪನೆ

ರೂಪಿತ.ಕೆ.ಕುದ್ಕುಳಿ
ತೃತೀಯ ಪತ್ರಿಕೋದ್ಯಮ

**ದೊ**ಡ್ಡ ದೊಡ್ಡ ಸಿಟಿಗಳಲ್ಲಿರುವ ಕಾಲೇಜುಗಳಿಗೆ ಹೋಗಬೇಕು. ಅಂತಹ ಕನಸು ಕಂಡದ್ದು ನನಸಾದರೂ ಆರಂಭದಲ್ಲಿ ಯಾಕಾದ್ರೂ ಇಲ್ಲಿಗೆ ಬಂದೆನೋ ಅನ್ನೋದು ಸಹಜ. ಸಿಟಿಗಳು ಇರೋದೆ ಹಾಗೆ.

ಪದೇ ಪದೇ ಅಮ್ಮ ಹೇಳಿದ ಹುಷಾರು ಅನ್ನುವ ಮಾತನ್ನು ನೆನಪಿಸುತ್ತಲೇ ಅವಳು ಕಾಲೇಜು ಹೆಜ್ಜೆ ಹಾಕುತ್ತಾಳೆ. ಜೀನ್ಸ್, ಶಾರ್ಟ್ ಸ್ಕರ್ಟ್, ಹುಡುಗಿಯರು ಎದುರಾದಗೆಲ್ಲಾ ಮಾಮೂಲಿ ಚೂಡಿದಾರದಲ್ಲಿರುವ ಅವಳಿಗೆ ಎಂಥದ್ದೋ ಕೀಳರಿಮೆ. ನಾಲ್ಕಾರು ಅಂತಸ್ತಿನ ಕಾಲೇಜಿನಲ್ಲಿ ತನ್ನ ಕ್ಲಾಸಿಗೆ ಸ್ಟೆಪ್ಸ್ ಹತ್ತುವಾಗ ಅದೇನೋ ಹುಮ್ಮಸ್ಸು. ಒಂದೆ- ರಡು ದಿನ ಕಳೆದರೂ ಯಾರನ್ನೂ ಅಷ್ಟೊಂದು ಸ್ನೇಹಿತರಾಗಿರಿಸಲಿಲ್ಲ.



ಕಾಲೇಜಿಗೆ ಸೇರಿದ ಮೊದ ಮೊದಲ ದಿನಗಳೇ ಹಾಗೇ. ಎಂಥದ್ದೋ ಮೌನಭಯ. ಅಳುವೇ ಬಂದಂತಾಗಿ ಬಿಡುತ್ತದೆ. ಅದರಲ್ಲೂ ಪುಟ್ಟ ನಗರ ಅಥವಾ ಹಳ್ಳಿ ಕಾಲೇಜಿನಿಂದ ಓದಲಿಕ್ಕಾಗಿಯೇ ಬರುತ್ತಾರಲ್ಲ. ಅವರನ್ನು ಸಿಟಿಯ ಜೀವನ ಶೈಲಿ ಭಯ ಬೀಳಿಸಿ ಬಿಡುತ್ತದೆ. ಕೇವಲ ಕಾಲೇಜಲ್ಲ ಇಡೀ ಊರೇ ಅವರ ಪಾಲಿಗೆ ಹೊಸತು. ಇಲ್ಲಿ ಮಾತು ಮಾತಿಗೆ ಮುದ್ದಿಸುವ ಹಠಕ್ಕೆಲ್ಲ ಮಣೆ ಹಾಕುವ ಅಪ್ಪ ಅಮ್ಮ ಇಲ್ಲ. ಏಕಾಂಗಿ ಹೋರಾಟ ಶುರುವಾಗಿದೆ.

ಮೊದ ಮೊದಲು ದೂರದವರು ಬಸ್ಸಲ್ಲಿ ಬರುವುದೆಂದರೆ ಅದೇನೋ ಖುಷಿ. ನಗರದಲ್ಲಿ 200ಕ್ಕೂ ಹೆಚ್ಚು ಮಂದಿ ನಿಂತಿರುವ ಸ್ಥಳದಲ್ಲಿ ಖಾಸಗಿ ಸರಕಾರಿ ಬಸ್ಸುಗಳು ಬಂದಾಗ ಎಂಥಹ ಜನ ಸಂದಣಿ ಈ ಹುಡುಗಿಯರಿಗಂತೂ ಎಲ್ಲಿಯೂ ಹತ್ತಲು ಬಿಡದ ಹುಡುಗರು. ಅಲ್ಲಿಂದ ಪುನಃ ಮೈನ್ ಸ್ಟಾಂಡಿಗೆ ಬಂದಾಗ ತಮ್ಮ-ತಮ್ಮ ಊರಿನವರದೇ ಜನ ಸಂದಣಿ. ಇದರಲ್ಲಿ ಬಸ್ ಚಾಲಕನದೊಂದು ಕೀಟಲೇ. ಜನ ಎಲ್ಲಿ ಸೇರಿದ್ದಾರೋ ಅಲ್ಲಿಗೆ ಬಸ್ಸು ತರೋದು. ಜನ ಹಿಂದಕ್ಕೆ ಸರಿಲೀ ಅಂತ. ಒಂದೊಮ್ಮೆ ಬಾಗಿಲ ಬಳಿ ನಿಂತ ಜನ ಅಪ್ಪಚ್ಚಿಯಾಗಿ ದೂಡಿ ಅಲ್ಲಿ ಒಂದೆರಡು ಬೀಳುವುದು. ಅದರಲ್ಲೂ ಕಾಲೇಜು ಹುಡುಗಿಯರು ಬಿದ್ದರೆ, ಅವರ ಆ ನಾಚಿಕೆಯ ಮುಖದ ಜೊತೆ ತಮ್ಮ ಜೊತೆ- ಗಿದ್ದ ಫ್ರೆಂಡ್ಸ್ ಯಾರಾದ್ರೂ ನೋಡಿದ್ರಾ ಅಂತ ಕೇಳ್ತಾ ನಾಚಿಕೆ ವ್ಯಕ್ತಪಡಿಸುವುದು. ಒಟ್ಟಾರೆ- ಯಾಗಿ ವಿದ್ಯಾರ್ಥಿಗಳ ಪರಿಸ್ಥಿತಿ ಅನುಭವಿಸಿದಾಗಲೇ ಅರ್ಥವಾಗುವುದು. ಅಂತು- ಇಂತೂ ಮೊದಲು ಬೋರೆನಿಸಿದ ಆ ಕಾಲೇಜು ಕೊನೆಗೆ ಕಾಲೇಜು ಮುಗಿಯೋದೆ ಬೇಡ ಅನ್ನುವ ಲೆವೆಲ್‌ಗೆ ನಮ್ಮನ್ನು ಹೆದರಿಸಿದ ಆ ಕಾಲೇಜು ಸೆಳೆದು ಬಿಡುತ್ತದೆ. ಇಂತಹ ಹಲವಾರು ಸನ್ನಿವೇಶಗಳು ನಿಮ್ಮಲ್ಲೂ ಒಮ್ಮೆಯಾದರೂ ನಡೆದಿರಬಹುದಲ್ಲವೇ? ಒಮ್ಮೊಂದೊಮ್ಮೆ ಕಣ್ಣಂಚಿನಲ್ಲಿ ಕಲ್ಪಿಸಿಕೊಳ್ಳುವ ಸಾಧ್ಯತೆಯನ್ನು ಮಾಡೋಣ....

# ಒತ್ತಡದ ಶಿಕ್ಷಣ ಅಗತ್ಯವೇ...?

ರಕ್ಷಿತ್. ರೈ. ಪುಂಡಿಕಾಯಿ
ತೃತೀಯ ಪತ್ರಿಕೋದ್ಯಮ



**ಆ**ಧುನಿಕತೆ ಬೆಳೆದಂತೆ ಶಿಕ್ಷಣ ವ್ಯವಸ್ಥೆಯಲ್ಲಿಯೂ ವಿವಿಧ ರೀತಿಯಲ್ಲಿ ಬದಲಾವಣೆಯಾಗುತ್ತಿದೆ. ಸ್ಪರ್ಧಾತ್ಮಕ ಯುಗದಲ್ಲಿ ಎಲ್ಲಾ ಹೆತ್ತವರು ತಮ್ಮ ಮಕ್ಕಳು ಡಾಕ್ಟರ್, ಇಂಜಿನಿಯರ್, ವಿಜ್ಞಾನಿ ....ಮುಂತಾದ ಉನ್ನತ ಪದವಿಯನ್ನು ಪಡೆಯಬೇಕೆಂಬ ಕನಸು ಹೊಂದಿರುತ್ತಾರೆ. ಇದನ್ನು ನನಸು ಮಾಡಲು ತಮ್ಮ ಮಕ್ಕಳನ್ನು ಹಲವು ವಿಧಗಳಲ್ಲಿ ಶೋಷಿಸುತ್ತಿದ್ದಾರೆ. ಮಕ್ಕಳು ಹೆಚ್ಚಾಗಿ ಬಾಲ್ಯದಲ್ಲಿ ತಮ್ಮ ಗೆಳೆಯರೊಂದಿಗೆ ತುಂಟಾಟದ ಮೂಲಕ ಸಮಯ ಕಳೆಯಲು ಬಯಸುತ್ತಾರೆ. ಆದರೆ ಹೆತ್ತವರು ಅವರ ಆಟೋಟಗಳಿಗೆ ಕಡಿವಾಣ ಹಾಕಿ 'ಓದು' ಎಂಬ ಚೌಕಟ್ಟಿನ ಒಳಗಡೆ ಬಂಧಿಸುತ್ತಿದ್ದಾರೆ. ತಂದೆ ತಾಯಿ ತಮ್ಮ ದೃಷ್ಟಿಕೋನಕ್ಕನುಗುಣವಾಗಿ ಮಕ್ಕಳ ಮೇಲೆ ಒತ್ತಡ ಹೇರುತ್ತಾರೆ. ಇದು ಮಕ್ಕಳ ಸುಪ್ತ ಮನಸಿನ ಮೇಲೆ ಪ್ರಭಾವ ಬೀರುತ್ತದೆ. ಇದರಿಂದ ಮಕ್ಕಳು ಮಾನಸಿಕ ತೊಳಲಾಟಕ್ಕೆ ಒಳಗಾಗುತ್ತಾರೆ. ಮಕ್ಕಳು ತಪ್ಪು ಮಾಡುವುದು ಸಹಜ ಆದ- ರೆ ತಿದ್ದಿ ಬುದ್ದಿವಾದ ಹೇಳಬೇಕಾದ ತಂದೆ- ತಾಯಿಯರೇ ತಮ್ಮ ಮಕ್ಕಳು ಇತರರ ಮಕ್ಕಳಂತೆ ರೂಪುಗೊಳ್ಳಬೇಕೆಂದು ಮಾಡುವುದರ ಮೂಲಕ ತಮ್ಮ ಮಗುವನ್ನು ಮಾನಸಿಕವಾದ ಒತ್ತಡ- ಕ್ಕೆ ಈಡು ಮಾಡುತ್ತಿದ್ದಾರೆ. ತಮ್ಮ ಮಕ್ಕಳು ಓದು ಮತ್ತು ಇತರ ಚಟುವಟಿಕೆಯಲ್ಲಿ ಮುಂಚೂಣಿಯಲ್ಲಿರಬೇಕು ಎನ್ನುವುದು ಎಲ್ಲಾ ಹೆತ್ತವರ ಆಸೆ. ಓದಿನೊಂದಿಗೆ ಇತರ ಚಟುವಟಿಕೆಗಳಲ್ಲೂ ಮುಂಚೂಣಿಯಲ್ಲಿರಬೇಕೆಂಬ ಹಂಬಲವೂ ಹೆಚ್ಚು. ಅದಕ್ಕಾಗಿ ಮಕ್ಕಳನ್ನು ಹೆಚ್ಚಿನ ಕಲಿಕೆಗಾಗಿ ಸಾವಿರಾರು ರೂಪಾಯಿ ಖರ್ಚು ಮಾಡಿ ಟ್ಯೂಷನ್ ಎಂಬ ಬಂಧನದಲ್ಲಿ ಬಂಧಿಸುತ್ತಾರೆ. ಮಕ್ಕಳು ಇದರಿಂದ ಹೊರಬಂದಾಗ ಶಾಲೆಗಳಲ್ಲಿ ನೀಡುವ ಪುಟಗಟ್ಟಲೆ ಬರೆಯುವ ಹೋಮ್‌ವರ್ಕ್ ಎಂಬಿತ್ಯಾದಿ ಕಟ್ಟುಪಾಡುಗಳು ಮಕ್ಕಳನ್ನು ಒತ್ತಡಕ್ಕೆ ತಳ್ಳುತ್ತದೆ. ಇದ- ರಿಂದ ಮಕ್ಕಳು ಮಾನಸಿಕವಾದ ಗೊಂದಲಕ್ಕೊಳಪಡುತ್ತಾರೆ.

ಮಕ್ಕಳು ಸ್ಪರ್ಧಾತ್ಮಕ ಚಟುವಕೆಗಳಲ್ಲಿ ಗೆಲ್ಲಲೇಬೇಕೆಂಬ ಹಂಬಲದಿಂದ ಅವರಿಗೆ ಒತ್ತಡ ಹೇರುತ್ತಾರೆ. ಎಲ್ಲಿಯಾದರು ಸೋತ ಸಂದರ್ಭದಲ್ಲಿ ಅವರನ್ನು ಹೀಯಾಳಿಸಿ ಧೈರ್ಯಗೆಡುವಂತೆ ಮಾಡುತ್ತಾರೆ. ಬೇರೆ ಮಕ್ಕಳೊಂದಿಗೆ ತಮ್ಮ ಮಕ್ಕಳನ್ನು ಹೋಲಿಸಿ ಅವರಿಗೆ ಮಾನಸಿಕವಾಗಿ ಸೋಲೊಪ್ಪಿಕೊಳ್ಳುವಂತೆ ಮಾಡುವಲ್ಲಿ ಪ್ರೇರೇಪಿಸಿದಂತಾಗುತ್ತದೆ. ಸೋಲು ಪ್ರತಿಯೊಬ್ಬ ಮನುಷ್ಯನ ಜೀವನದಲ್ಲಿ ಬದಲಾವಣೆಯ ಪಾಠ ಕಲಿಸುತ್ತದೆ. ಸೋತಾಗ ಮಾತ್ರ ಹೆಚ್ಚಿನ ತಿಳುವಳಿಕೆ ಮತ್ತು ಪ್ರಯತ್ನ ಮಾಡುವ ಗುಣ ಬೆಳೆಯುತ್ತದೆ. ಆದ್ದರಿಂದ ಹೆತ್ತವರು ಮಕ್ಕಳು ಸೋತಾಗ ಬೆನ್ನುತಟ್ಟಿ ಪ್ರೋತ್ಸಾಹ ನೀಡಿ ಸೋಲನ್ನು ಸ್ವೀಕರಿಸುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಬೇಕು.

ಒಟ್ಟಿನಲ್ಲಿ ಮಕ್ಕಳು ಬಾಲ್ಯವನ್ನು ತುಂಟಾಟದಿಂದ ಸಂತೋಷವಾಗಿ ಕಳೆಯಲು ಅಪೇಕ್ಷಿಸುತ್ತಾರೆ. ಆದರೆ ಹೆತ್ತವರು ಇದಕ್ಕೆ ತದ್ವಿರುದ್ಧವಾಗಿ ನಡೆಯುವುದಕ್ಕೆ ಪೂರ್ಣವಿರಾಮ ಹಾಕಬೇಕು. ತಮ್ಮ ಮಕ್ಕಳಿಗೆ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಾ ಉತ್ತಮ ವಿಚಾರಗಳನ್ನು ತಿಳಿಸಬೇಕಾಗಿದೆ. ಎಲ್ಲಾ ಮಕ್ಕಳು ಒಂದೇ ರೀತಿಯ ಪ್ರತಿಭೆ ಹೊಂದಲು ಸಾಧ್ಯವಿಲ್ಲ. ಆದ್ದರಿಂದ ಅವರು ಯಾವ ವಿಷಯದಲ್ಲಿ ಆಸಕ್ತಿ ಹೊಂದಿರುತ್ತಾರೋ ಆ ವಿಚಾರವನ್ನು ಪ್ರೋತ್ಸಾಹಿಸುತ್ತಾ ಬಂದರೆ, ಮಕ್ಕಳಲ್ಲಿರುವ ಉಜ್ವಲ ಪ್ರತಿಭೆಯನ್ನು ಹೊರತರಲು ಸಾಧ್ಯ. ಶಿಕ್ಷಣದಿಂದ ಕೇವಲ ಉತ್ತಮ ವೇತನ, ಉದ್ಯೋಗ ಪಡೆಯಬೇಕೆಂಬ ಮನಸ್ಸಿದ್ದರೆ ಸಾಲದು ನಾವು ಮಕ್ಕಳಿಗೆ ನೀಡುವ ಶಿಕ್ಷಣವು ಅವರ ಜೀವನಕ್ಕೆ ದಾರಿದೀಪವಾಗಿರಬೇಕು. ಅದರೊಂದಿಗೆ ಮಾರ್ಗದರ್ಶಕವಾಗಿರಬೇಕು. "ಮಕ್ಕಳಿಗೆ ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು" ಆದ್ದರಿಂದ ಉತ್ತಮ ಶಿಕ್ಷಣವು ಮನೆಯಂದಲೇ ತೊ -ಡಗಿ, ತಾಯಿ ಉತ್ತಮ ಗುರುವಾಗಿ, ಮಕ್ಕಳು ಉತ್ತಮ ಸಾಧನೆ ಮಾಡುವವರಾಗಿ ಬೆಳೆಯ ಬೇಕಾಗಿದೆ.

# ಮಾತೆಂಬ ಮುತ್ತನ್ನರಸುತ್ತಾ......

ಪ್ರಣವ ಕೆ.
ತೃತೀಯ ಪತ್ರಿಕೋದ್ಯಮ

'**ಸೈ**ಲೆನ್ಸ್ ಪ್ಲೀಸ್' ಎಂಬ ಉಪನ್ಯಾಸಕರ ಆರ್ಡರ್‌ಗಳಿಲ್ಲ. 'ಪ್ಲೀಸ್ ಟಾಕ್' ಎಂಬ ಮಾತುಗಳೇ ಎಲ್ಲಾ !.




ಹೌದು ಸ್ವಾಮೀ, ಇದು ಪತ್ರಿಕೋದ್ಯಮ ವಿಭಾಗ ನಡೆಸುತ್ತಿರುವ 'ಮಣಿಕರ್ಣಿಕ ಮಾತುಗಾರರ ವೇದಿಕೆ'ಯ ವಿಶೇಷತೆ. ಸದಾ ಕ್ರಿಯಾಶೀಲತೆಯಿಂದ ಮುನ್ನಡೆಯುತ್ತಿರುವ ಪತ್ರಿಕೋದ್ಯಮ ವಿಭಾಗ, ವಿದ್ಯಾರ್ಥಿಗಳನ್ನು ಸೃಜನಾತ್ಮಕ ಮಾತುಗಾರರನ್ನಾಗಿಸಲು ಪಣತೊಟ್ಟು ಈ ವೇದಿಕೆಯನ್ನು ಹುಟ್ಟು ಹಾಕಿತ್ತು. ತರಗತಿಗಳಲ್ಲಿ, ಕಾರಿಡಾರ್‌ಗಳಲ್ಲಿ ನಾವೆಲ್ಲರೂ ಸಾಕಷ್ಟು ಮಾತನಾಡುತ್ತೇವೆ. ಅಲ್ಲಿ ಮಾತಿಗೆಂದೂ ಬರವಿಲ್ಲ. ಆದರೆ ವೇದಿಕೆಯನ್ನೇರಿ ಮಾತನಾಡುವುದೆಂದರೆ ತಳಮಳ. ಈ ತಳಮಳವನ್ನು ಹೋಗಲಾಡಿಸಲು ನಮ್ಮ ವೇದಿಕೆ ಅವಕಾಶವನ್ನು ನೀಡುತ್ತದೆ.

'ಮಣಿಕರ್ಣಿಕ ಮಾತುಗಾರರ ವೇದಿಕೆ'ಗೀಗ ಮೂರರ ಹರೆಯ. ಪ್ರತಿ ವಾರ ವಿಭಾಗದ ಸೂಚನಾ ಫಲಕದಲ್ಲಿ ಆ ವಾರದ ಮಾತಿನ ವಿಷಯವನ್ನು ಪ್ರಕಟಿಸಲಾಗುತ್ತದೆ. ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳು ಮಾತ್ರವಲ್ಲದೆ ಇತರ ವಿಭಾಗದ ಉತ್ಸಾಹಿ ಮಾತುಗಾರರು ವೇದಿಕೆಯನ್ನೇರಿ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾರೆಂದರೆ ಅದು ಮಣಿಕರ್ಣಿಕ ವೇದಿಕೆಯ ಸಾರ್ಥಕತೆಗೆ ಹಿಡಿದ ಕೈಗನ್ನಡಿ ಎಂದರೆ ತಪ್ಪಾಗಲಾರದು.

ನಮ್ಮದೇ ವಿದ್ಯಾಸಂಸ್ಥೆಗಳ ವಿವಿಧ ವಿಭಾಗದ ಅಧ್ಯಾಪಕರನ್ನು ಅತಿಥಿಯಾಗಿ ಆಹ್ವಾನಿಸಲಾಗತ್ತದೆ. ಉಡುಗೊರೆ, ಹೆಸರಲ್ಲೇನಿದೆ?, ರಾಂಗ್‌ನಂಬರ್, ರಜಾ- ಮಜಾ, ಪ್ರಳಯಾನಂತರ, ಪ್ರೇಮ ಪುರಾಣ.... ಎಂಬಿತ್ಯಾದಿ ಮನೋರಂಜನೆಯ ವಿಷಯಗಳು ವಿದ್ಯಾರ್ಥಿಗಳನ್ನು ವೇದಿಕೆಯೇರಿ ಮಾತನಾಡಲು ಪ್ರೇರೇಪಿಸುತ್ತವೆ . ಈವರೆಗೆ ವೇದಿಕೆಯನ್ನೇರದ ಅನೇಕ ಸ್ನೇಹಿತರು ಆತ್ಮವಿಶ್ವಾಸದಿಂದ ವೇದಿಕೆಯೇರುತ್ತಾರೆಂದರೆ ಅದರಲ್ಲಿ 'ಮಣಿಕರ್ಣಿಕ ಮಾತುಗಾರರ ವೇದಿಕೆಯ' ಪಾಲು ಬಹಳಷ್ಟಿದೆ.

ಸ್ನೇಹಿತರೇ, ಇದು ಮಣಿಕರ್ಣಿಕ ಮಾತುಗಾರರ ವೇದಿಕೆಯ ಕ್ವಿಕ್ ಕ್ಲಿಕ್. ಪ್ರತಿ ವಾರ ರೋಮಾಂಚಕ ವಿಷಯಗಳೊಂದಿಗೆ, ವಿಶೇಷ ಅತಿಥಿಗಳೊಂದಿಗೆ ನಿಮ್ಮನ್ನು ಭೇಟಿಯಾಗ್ತೀವಿ. ಇನ್ಯಾಕೆ ತಡ? ನೀವೂ ಬನ್ನಿ! ನಿಮ್ಮ ವಿದ್ಯಾರ್ಥಿ ಮಿತ್ರರನ್ನೂ ಕರೆತನ್ನಿ...!

# ಚೆಲುವಿನ ಛತ್ರಿಗಳ ಚಿತ್ತಾರ

ಅಕ್ಷತ ಆಚಾರ್ಯ
ದ್ವಿತೀಯ ಪತ್ರಿಕೋದ್ಯಮ

**ಮ**ಳೆಗಾಲ ಬಂತೆಂದರೆ ಕೊಡೆಗಳ ಸೀಸನ್ ಪ್ರಾರಂಭ. ಕಾಲೇಜ್ ಬಿಡುವ ಹೊತ್ತಿಗೆ ಕಣ್ಣಾಯಿಸಿದರಂತೂ ಎಲ್ಲಾ ಕಡೆ ಹೂವಿನ ಚಿತ್ತಾರ. ಆಧುನಿಕತೆ ಮರುಕಳಿಸುತ್ತದೆ ಎನ್ನುವಂತೆ ಪ್ರಸ್ತುತ ಟ್ರೆಂಡ್ ಆಗಿರುವುದು, ಹಳೇ ಕಾಲದ ಅಜ್ಜನ ಕೊಡೆ. ಹಿಂದಿನ ಕಾಲದಲ್ಲಿ ಅಜ್ಜನ ಕಪ್ಪು ಬಣ್ಣದ, ಮರದ ಉದ್ದ ಕೋಲಿನ ಕೊಡೆಗಳನ್ನು ಮಕ್ಕಳು ಹಿಡಿಯುತ್ತಿರಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಇದೇ ಫ್ಯಾಷನ್ ಆಗಿ ಬಿಟ್ಟಿದೆ. ಇದರಲ್ಲೂ ವಿವಿಧ ವಿನ್ಯಾಸಗಳು.



ಕೊಡೆಗಳ ಮೇಲೆ ಸಣ್ಣ ನಕ್ಷತ್ರಗಳು, ಮಿನಿ ಬೊಂಬೆಗಳು, ಕಾರ್ಟೂನ್‌ಗಳು, ಸ್ಮೈಲೀ ಮುಖಗಳು, ಹೀಗೆ ಹತ್ತು ಹಲವು ಡಿಸೈನ್‌ಗಳು. ಫ್ಯಾಷನ್ ಕೊಡೆಗಳು ಬಂದ ನಂತರ ಸಾಂಪ್ರದಾಯಿಕ ಕೊಡೆಗಳಿಗೆ ಬೇಡಿಕೆ ಇಳಿದಿದೆ. ಸಹಪಾಠಿಗಳ ಕೊಡೆಗಳು ನಮ್ಮದಕ್ಕಿಂತ ಭಿನ್ನವಾಗಿದ್ದರೆ ಅದರ ಬಗ್ಗೆ ತಿಳಿದುಕೊಳ್ಳುವ ತವಕ ಬೇರೆ. ಬಸ್ಸು, ಆಟೋ, ತರಗತಿ ಕಿಟಕಿ ಎಲ್ಲೆಂದರಲ್ಲಿ ಕೊಡೆಯನ್ನು ಮರೆತು ಹೋಗುವ ಕಾಯಿಲೆಗಂತೂ ಮದ್ದೇ ಇಲ್ಲ.

ಕೊಡೆಗಳಿಗು ಕಂಡೆಕ್ಟರ್‌ಗಳಿಗು ಎಣ್ಣೆ ಸೀಗೇಕಾಯಿ ಸಂಬಂಧ. ಒದ್ದೆ ಕೊಡೆ ಹಿಡಿದು ಬಸ್ಸಿನ ಮೆಟ್ಟಲು ಹತ್ತುತ್ತಿದ್ದಂತೆ, ಬೈಗುಳ ಕೇಳತೀರದು. ಮಳೆಗಾಲದಲ್ಲಿ ಎಲ್ಲರ ಮನೆಯಲ್ಲಿ ಒಂದು ಚರ್ಚೆ ಸಹಜ: ಕೊಡೆ ಮುರಿದುಕೊಂಡು ಬಂದದಕ್ಕಾಗಿ ಕಾರಣಗಳ ಸುರಿಮಳೆ. ಚಿಕ್ಕ ಮಕ್ಕಳಿಗೆ ಕೊಡೆ ಒಂದು ಯುದ್ಧದ ಸಾಧನವಾದರೆ, ಇನ್ನೂ ಕೆಲವರಿಗೆ ಬೆನ್ನಲ್ಲಿ, ಕೈಯಲ್ಲಿ, ಬ್ಯಾಗಿನ ಸೈಡಲ್ಲಿ ನೇತಾಡುವ ಉಪಕರಣ. ಕೈಯಲ್ಲೊಂದು ಚಂದದ ಕೊಡೆಯೊಂದಿಗೆ ಮಳೆಗಾಲದಲ್ಲಿ ದಿನ ದೂಡಿದರೆ ಅದಕ್ಕೆ ಮಿಗಿಲಾದ ಸಂತಸ ಇನ್ನೊಂದಿಲ್ಲ.